ಹೆಂಗಸರನ್ನ ಕೆಟ್ಟದಾಗಿ ಚಿತ್ರಿಸಿಬಿಟ್ಟಿದ್ದಾರೆ. ಅದು ಈಗಿನ ಕಾಲದಲ್ಲಿ ಓದುವಾಗ ತೊಡಕಾಗುತ್ತದೆ. ಶೇಕ್ಸ್‌ಪಿಯರನೇ ಈಗಿದ್ದರೆ ಹಾಗೆ ಬರೆಯುತ್ತಿರಲಿಲ್ಲವೋ ಏನೋ. ಅದಕ್ಕೇ ನಾವು ಫೆಮಿನಿಸ್ಟ್ ವರ್ಷನ್ ಆಫ್ ಕ್ಲಾಸಿಕ್ಸ್ ಅಂತ ಸರಣಿ ಶುರು ಮಾಡೋಣ. ಮುಂದೆ ಕನ್ನಡದ ಕ್ಲಾಸಿಕ್‌ಗಳನ್ನೂ ಈ ಯೋಜನೆಯೊಳಗೆ ಸೇರಿಸಿಕೊಳ್ಳಬಹುದು. ದೇಶದಲ್ಲೇ ದೊಡ್ಡ ಹೆಸರು ಮಾಡಬಹುದು, ಏನಂತಿ?" ಅಂದಳು.

"ನಿನಗೇನು ತಲೆ ಕೆಟ್ಟಿದೆಯಾ ಸುನಿ? ಹಾಗೆಲ್ಲ ಸತ್ತು ಹೋದ ಬರಹಗಾರರ ಬರಹಗಳನ್ನ ತಿದ್ತಾರಾ? ನಮ್ಮನ್ನ ಜೈಲಿಗೆ ಹಾಕ್ತಾರಷ್ಟೇ. ಮತ್ತು ಈ ಸಾಹಿತಿಗಳಿದಾರಲ್ಲ ಅವರು ಸಾಮಾನ್ಯದವರು ಅಂದುಕೋಬೇಡ. ಸುಮ್ಮನಿರ್ತಾರೆ ನಿಜ. ಆದರೆ, ಇಂಥ ಸುದ್ದಿಯ ಸಣ್ಣ ಸುಳಿವು ಸಿಕ್ಕರೂ ಸಾಕು, ಗುಂಪು ಕಟ್ಟಿಕೊಂಡು ಬಂದೇ ಬಿಡ್ತಾರೆ. ನಾಳೆ ಹೋರಾಟ ಧರಣಿ ಅಂತ ಶುರುವಾಗಿ ನಮ್ಮ ಆಫೀಸಿನ ಕಿಟಕಿ ಗಾಜಿನ ಮೇಲೆ ಕಲ್ಲು ಬೀಳೋ ಹಂಗೆ ಒಂದು ಮಾಡಬೇಡ" ಅಂತ ಗದರಿ ಹೇಳಿದೆ.

ನಮ್ಮ ಇಂಥವೇ ತಕರಾರುಗಳಿಂದ ಪುಸ್ತಕಮನೆ ಶುರುವಾಗಿ ಆರು ತಿಂಗಳಾದರೂ ಇನ್ನೂ ಯಾವ ಪುಸ್ತಕವನ್ನೂ ಪ್ರಕಟಿಸಲಾಗಲಿಲ್ಲ. ದಾದಾನ ಆತ್ಮಕತೆಯೊಂದು ತಯಾರಾಗುತ್ತಿತ್ತು. ಸುನೇತ್ರಾ ಆ ಬಗ್ಗೆ ವಿರೋಧ ವ್ಯಕ್ತಪಡಿಸುವಷ್ಟು ಮಾಡಿ ನಾನು ಬಗ್ಗುವುದಿಲ್ಲ ಅಂತ ಗೊತ್ತಾದಾಗ ಆ ಕುರಿತು ಮಾತನಾಡುವುದನ್ನೇ ಬಿಟ್ಟುಬಿಟ್ಟಿದ್ದಳು. ಇವಳನ್ನು ಪುಸ್ತಕ ಪ್ರಕಟಣೆಯ ವ್ಯವಹಾರದೊಳಗೆ





